ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

---

ಸಂಖ್ಯೆ:ಪ್ರ.ವಿ./ 4 /2018-19

ದಿನಾಂಕ: 30-08-2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಉಂಟಾಗಿರುವ ತುರ್ತು ಪರಿಸ್ಥಿತಿಯ ಹಿನ್ನಲೆಯಲ್ಲಿ ನಡೆಸಲಾಗುತ್ತಿರುವ ಕಾರ್ಯಗಳ ಸಂಬಂಧ ಮೇಲ್ವಿಚಾರಣೆಗೆ ಅಧಿಕಾರಿ ನೇಮಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿ.ಪಿ.ಎ.ಆರ್. 368 ಎಸ್.ಎ.ಎಸ್. 2018 ದಿನಾಂಕ 23.08.2018

2) ಈ ಕಚೇರಿ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿನಾಂಕ 23.08.2018

---

ಕೊಡಗು ಜಿಲ್ಲೆಯಲ್ಲಿ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ/ ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಪ್ರಸ್ತುತ ಪರಿಹಾರ ವಿತರಣೆ / ಮೂಲ ಸೌಕರ್ಯಗಳ ಪುನರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ.

ಕೊಡಗು ಜಿಲ್ಲೆಯಲ್ಲಿ ಆಗಿರುವ ಪ್ರಕೃತಿ ವಿಕೋಪ ಹಿನ್ನಲೆಯಲ್ಲಿ ಪರಿಹಾರ ಕಾರ್ಯಗಳ ಸಂಬಂಧ ಜಿಲ್ಲಾಡಳಿತಕ್ಕೆ ಸಹಕರಿಸಲು ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಂತೆ 9 ಪರಿಕ್ಷಾರ್ಥಿ ಐ.ಎ.ಎಸ್. ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ. ಸದರಿ ಅಧಿಕಾರಿಗಳಿಗೆ ಉಲ್ಲೇಖ(2)ರ ಅಧಿಕೃತ ಜ್ಞಾಪನದಂತೆ ವಿವಿಧ ತುರ್ತು ಕಾರ್ಯಗಳ ಹಂಚಿಕೆ ಮಾಡಲಾಗಿತ್ತು.

ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಆಗಿರುವ ನಷ್ಟದ ಸಮೀಕ್ಷೆ ನಡೆಸಲು ಹೋಬಳಿವಾರು ತಂಡ ರಚಿಸಲಾಗಿರುತ್ತದೆ. ಈ ತಂಡಗಳು ಸಮೀಕ್ಷೆ ಕಾರ್ಯದಲ್ಲಿ ತೊಡಗಿದ್ದು, ಪರಿಣಾಮಕಾರಿಯಾಗಿ ಪೂರ್ಣಗೊಳಿಸಲು ಮೇಲ್ವಿಚಾರಕ ಅಧಿಕಾರಿಗಳನ್ನು ನೇಮಿಸುವುದು ಸೂಕ್ತವೆಂದು ಕಂಡುಬಂದ ಹಿನ್ನಲೆಯಲ್ಲಿ ಉಲ್ಲೇಖ(2)ರಂತೆ ಹೊರಡಿಸಲಾಗಿದ್ದ ಅಧಿಕೃತ ಜ್ಞಾಪನವನ್ನು ಹಿಂಪಡೆಯುತ್ತಾ, ಸದರಿ ಅಧಿಕಾರಿಗಳಿಗೆ ಈ ಕೆಳಕಂಡಂತೆ ಕಾರ್ಯಭಾರ ಹಂಚಿಕೆ ಮಾಡಿ ಹೋಬಳಿವಾರು ಮೇಲ್ವಿಚಾರಕರನ್ನಾಗಿ ನೇಮಿಸಿ ಆದೇಶಿಸಿದೆ.

| ಕ್ರ.ಸಂ. | ಹೆಸರು ಮತ್ತು ಪದನಾಮ | ನಿಯೋಜಿಸಲಾದ ಹೋಬಳಿ |
|---|---|---|
| 1 | ಎಂ. ಪ್ರಿಯಾಂಗಾ,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>9750226609 | ಮಡಿಕೇರಿ |
| 2 | ಅಕ್ಷಯ್ ಶ್ರೀಧರ್,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>9944841873 | |

| | | |
|---|---|---|
| 3 | ಡಾ: ನಂದಿನಿ ದೇವಿ ಕೆ.,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>7598038845 | ಸಂಪಾಜೆ |
| 4 | ಡಾ: ನವೀನ್ ಭಟ್ ವೈ.<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>9164530765 | |
| 5 | ನಂದಿನಿ ಕೆ.ಆರ್.,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>9958527324 | ಕುಶಾಲನಗರ |
| 6 | ಶೇಕ್ ತನ್ವೀರ್ ಆಸಿಫ್,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>9582514321 | |
| 7 | ಲೋಕಂಡೆ ಸ್ನೇಹಲ್ ಸುಧಾಕರ್,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>9665423967 | ಸುಂಟಿಕೊಪ್ಪ |
| 8 | ಬಣ್ವಾರ್ ಸಿಂಗ್ ಮೀನಾ,<br>ಪರೀಕ್ಷಾರ್ಥಿ ಐ.ಎ.ಎಸ್. ಅಧಿಕಾರಿ<br>8120621667 / 9460956389 | |

ನಿಯೋಜಿತ ಮೇಲ್ವಿಚಾರಕ ಅಧಿಕಾರಿಗಳು ತಮಗೆ ವಹಿಸಲಾದ ಹೋಬಳಿಯಲ್ಲಿ ಅತಿವೃಷ್ಟಿಯಿಂದ ಆಗಿರುವ ಪ್ರಾಣಹಾನಿ, ಮನೆಹಾನಿ, ಬೆಳೆಹಾನಿ ಸಮೀಕ್ಷೆಗಳನ್ನು ಪರಿಣಾಮಕಾರಿಯಾಗಿ ನಿಗಧಿತ ಅವಧಿಯಲ್ಲಿ ನಡೆಸುವಲ್ಲಿ ಹಾಗೂ ತೆರೆಯಲಾಗಿರುವ ಪರಿಹಾರ ಕೇಂದ್ರಗಳ ಮೇಲ್ವಿಚಾರಣೆ ನಡೆಸುವುದು.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಪ್ರತಿಯನ್ನು: ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.